UASB Library
Newspaper Clippings
Wednesday 16-02-2022 Pg .1
Jai Kisan

3 ಲಕ್ಷ ಮೆ.ಟನ್ ರಾಗಿ ಖರೀದಿಗೆ ಪತ್ರ

ವಿಧಾನಸಭೆ: ರಾಜ್ಯದಲ್ಲಿ ಬೆಂಬಲ ಬೆಲೆ ಯೋಜನೆ ಅಡಿಯಲ್ಲಿ 2.10 ಲಕ್ಷ ಮೆಟ್ರಿಕ್ ಟನ್ ರಾಗಿ ಖರೀದಿಸಲಾಗಿದ್ದು ಇನ್ನೂ 3 ಲಕ್ಷ ಮೆಟ್ರಿಕ್ ಟನ್ ರಾಗಿ ಖರೀದಿಗೆ ಕೇಂದ್ರದ ಅನುಮತಿ ಕೋರಲಾಗಿದೆ ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಉಮೇಶ್ ಕತ್ತಿ ಹೇಳಿದ್ದಾರೆ.

ಗಮನ ಸೆಳೆಯುವ ಸೂಚನೆಯಡಿ ಕಾಂಗ್ರೆಸ್ ಹಾಗೂ ಜೆಡಿಎಸ್ ಸದಸ್ಯರು ರಾಗಿ ಖರೀದಿ ಮುಂದುವರಿಸಬೇಕು ಹಾಗೂ ಮಿತಿ ಹೆಚ್ಚಳ ಮಾಡಬೇಕು ಎಂಬ ಪ್ರಸ್ತಾಪಕ್ಕೆ ಉತ್ತರಿಸಿದ ಸಚಿವರು, ಸರ್ಕಾರ ಈ ವಿಚಾರದಲ್ಲಿ ಮುಕ್ತವಾಗಿದ್ದು ಕೇಂದ್ರಕ್ಕೂ ಪತ್ರ ಬರೆಯಲಾಗಿದೆ. ಮಾರ್ಚ್ 30 ರವರೆಗೂ ಖರೀದಿ ಮಾಡಲಾಗುವುದು ಎಂದು ಭರವಸೆ ನೀಡಿದರು.



ಮೊದಲಿಗೆ ವಿಷಯ ಪ್ರಸ್ತಾಪಿಸಿದ ಜೆಡಿಎಸ್‌ನ ಕೆ.ಎಂ. ಶಿವಲಿಂಗೇಗೌಡ , ರಾಜ್ಯ ಸರ್ಕಾರ ರಾಗಿ ಬೆಳೆಯನ್ನು ಬೆಂಬಲ ಬೆಲೆಯಲ್ಲಿ ಖರೀದಿ ಮಾಡುವುದಕ್ಕೆ ನಿರ್ಬಂಧ ಹೇರಿದೆ. ಕಳೆದ ವರ್ಷ ಉತ್ತಮ ಬೆಲೆ ಕೊಟ್ಟು ಖರೀದಿ ಮಾಡಿದ್ದರು. ಅದಕ್ಕೆ ಸರ್ಕಾರಕ್ಕೆ ಅಭಿನಂದಿಸುತ್ತೇನೆ. ಈ ಬಾರಿ ಖರೀದಿ ಮಾಡದೇ ರೈತರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ದೊಡ್ಡ ರೈತರು, ಸಣ್ಣ ರೈತರು ಅಂತ ಇಬ್ಭಾಗ ಮಾಡಲಾಗಿದೆ. ಸರ್ಕಾರ ರೈತರ ರಾಗಿ ಖರೀದಿ ಮಾಡಬೇಕು ಎಂದು ಆಗ್ರಹಿಸಿದರು.

ಅವರ ಮಾತಿಗೆ ಧ್ವನಿಗೂಡಿಸಿದ ಕಾಂಗ್ರೆಸ್ ಸದಸ್ಯ ಕೃಷ್ಣ ಬೈರೇಗೌಡ, ರಾಗಿಯನ್ನು 15 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿತ್ತು. ಸೂಕ್ತ ಬೆಲೆ ಸಿಗದೆ 2005 ರಲ್ಲಿ 9 ಲಕ್ಷ ಹೆಕ್ಟೇರ್‌ಗೆ ಇಳಿಯಿತು. ನಂತರ 5 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಇಳಿಯಿತು. ಒಡಿಶಾ, ಉತ್ತರಾಖಾಂಡ್, ಬಿಹಾರ ರಾಜ್ಯಗಳಲ್ಲಿ ರಾಗಿ ಬೆಳೆಯುತ್ತಾರೆ. ಅಲ್ಲಿ ಅದನ್ನು ಮಂಡುವಾ ಎಂದು ಕರೆಯುತ್ತಾರೆ. ಅದರ ಮೂಲ ಮಂಡ್ಯ ಎನ್ನುವ ಪದ ಮಂಡುವಾ ಎಂದು ಕರೆಯಲಾಗುತ್ತಿದೆ. ನಮ್ಮ ರಾಜ್ಯದ ಬೆಳೆಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ದೊರೆತಿದ್ದು ಅದಕ್ಕೆ ಬೆಂಬಲ ಬೆಲೆ ಕೊಟ್ಟು ರೈತರನ್ನು ಸರ್ಕಾರ ರಕ್ಷಣೆ ಮಾಡಬೇಕು ಎಂದು ಹೇಳಿದರು. ಬೆಂಬಲ ಬೆಲೆ ಯೋಜನೆ ಅಡಿಯಲ್ಲಿ ಖರೀದಿಸಲು ಸಣ್ಣ ಹಾಗೂ ದೊಡ್ಡ ರೈತರು ಅಂತ ವ್ಯತ್ಯಾಸ ಮಾಡಿಲ್ಲ, ಆದರೆ, ರಾಜ್ಯ ಸರ್ಕಾರ ಸಣ್ಣ ಮತ್ತು ಅತಿ ಸಣ್ಣ ರೈತರಿಂದ ಮಾತ್ರ, ನಿರ್ದಿಷ್ಟ ಪ್ರಮಾಣದಲ್ಲಿ ಮಾತ್ರ ಖರೀದಿ ಮಾಡುವುದಾಗಿ ಹೇಳಿದ್ದಾರೆ. ಅಧಿಕಾರಿಗಳು ಸಚಿವರ ದಾರಿ ತಪ್ಪಿಸುತ್ತಿದ್ದಾರೆ. ದಯವಿಟ್ಟು ಈ ಆದೇಶವನ್ನು ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು.

ಶಾಸಕರ ಪಶ್ನೆಗೆ ಉತ್ತರಿಸಿದ ಸಚಿವ ಉಮೇಶ್ ಕತ್ತಿ, ರೈತರಿಂದ ಪ್ರತಿ ಹೆಕ್ಟೇರ್‌ನಿಂದ 10 ಕ್ವಿಂಟಾಲ್‌ನಿಂದ 20 ಕ್ವಿಂಟಾಲ್‌ವರೆಗೆ ಖರೀದಿ ಮಾಡಲಾಗುತ್ತಿದೆ. ಕೇಂದ್ರ ಸರ್ಕಾರದ ನಿರ್ದೇಶನದಂತೆ ಈಗಾಗಲೇ 2 ಲಕ್ಷ ಕ್ವಿಂಟಾಲ್ ರಾಗಿ ಖರೀದಿಸಲಾಗಿದೆ. ಮತ್ತೆ 3 ಲಕ್ಷ ಕ್ವಿಂಟಾಲ್ ಖರೀದಿಗೆ ಕೇಂದ್ರಕ್ಕೆ ಮನವಿ ಮಾಡಿದ್ದೇವೆ. ಮಾರ್ಚ್ 30 ರೊಳಗೆ ಎಲ್ಲ ರಾಗಿಯನ್ನು ಖರೀದಿ ಮಾಡಲಾಗುವುದು. ಅಲ್ಲಿಯವರೆಗೂ ರೈತರು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

> ■ ಬೆಂಬಲ ಬೆಲೆಯಲ್ಲಿ ರಾಗಿ ಖರೀದಿಗೆ ಕಾಂಗ್ರೆಸ್-ಜೆಡಿಎಸ್ ಸದಸ್ಯರ ಆಗ್ರಹ

16-02-2022
Uv Pg 10

ಬೇಳೆ ಕಾಳು, ತಾಳೆ ಎಣ್ಣೆ ಆಮದು ಸುಂಕ ಇಳಿಕೆ

■ **ಎಕನಾಮಿಕ್ ಟೈಮ್ಸ್** ಹೊಸದಿಲ್ಲಿ

ಆಹಾರ ಹಣದುಬ್ಬರವನ್ನು ನಿಯಂತ್ರಿಸುವ ಉದ್ದೇಶದಿಂದ ಕೇಂದ್ರ ಸರಕಾರ ಆಸ್ಟ್ರೇಲಿಯಾ ಮತ್ತು ಕೆನಡಾದಿಂದ ಆಮದಾಗುವ ಬೇಳೆ ಕಾಳುಗಳು ಮತ್ತು ತಾಳೆ ಎಣ್ಣೆ(ಪಾಮ್ ಆಯಿಲ್) ಮೇಲಿನ ಸುಂಕವನ್ನು ಕಡಿತಗೊಳಿಸಿದೆ.

ಆಸ್ಟ್ರೇಲಿಯಾದಿಂದ ಬೇಳೆ ಕಾಳುಗಳ ಆಮದು ಮೇಲಿನ ಸುಂಕವನ್ನು ಶೂನ್ಯಕ್ಕಿಳಿಸಲಾಗಿದೆ. ಕೆನಡಾದಿಂದ ಆಮದಿಗೆ ಶೇ.22ಕ್ಕೆ ಮತ್ತು ಅಮೆರಿಕದಿಂದ ಶೇ.30ಕ್ಕೆ ಸುಂಕ ಕಡಿತಗೊಳಿಸಲಾಗಿದೆ.

ಕಚ್ಚಾ ತಾಳೆ ಎಣ್ಣೆ ಮೇಲಿನ ಆಮದು ಸುಂಕವನ್ನು ಶೇ.7.5ರಿಂದ ಶೇ.5ಕ್ಕೆ ತಗ್ಗಿಸಲಾಗಿದೆ. ಭಾರತ ವಿಶ್ವದಲ್ಲೇ ಅತಿ ದೊಡ್ಡ ಖಾದ್ಯ ತೈಲ ಆಮದು ರಾಷ್ಟ್ರವಾಗಿದೆ. ಕಚ್ಚಾತಾಳೆ ಎಣ್ಣೆ ಆಮದು ಮೇಲಿನ ಕೃಷಿ ಮೂಲಸೌಕರ್ಯ ಅಭಿವೃದ್ಧಿ ಸೆಸ್ ಅನ್ನು ಕಡಿತಗೊಳಿಸಲಾಗಿದೆ. ಇದರ ಪರಿಣಾಮ ಬೇಳೆ ಕಾಳು, ತಾಳೆ ಎಣ್ಣೆ ದರ ಇಳಿಕೆ ಸಾಧ್ಯತೆ ಇದೆ.

16-02-2022
Vk Pg 07

For more information visit
University Library Website
Web - uasbagrilibindia.org
E-mail- librarian@uasbangalore.edu.in

ಪ್ರವಾಸಿಗರ ನಿರೀಕ್ಷೆಯಲ್ಲಿ ಬಣ್ಣದ ಚಿಟ್ಟೆಗಳು



ರಾಜ್ಯದ ಮೊದಲ ತೆರೆದ ಚಿಟ್ಟೆ ಉದ್ಯಾನವನ

ಇಲ್ಲಿವೆ ನೂರಕ್ಕೂ ಅಧಿಕ ಚಿಟ್ಟೆ ಪ್ರಬೇಧ

ನಿತೀಶ ಡಂಬಳ

ಜೋಯಿಡಾ: ಕಣ್ಮನಸೆಳೆಯುವ ಬಗೆಬಗೆಯ ಬಣ್ಣದ ಚಿಟ್ಟೆಗಳು, ಸೂರ್ಯಾಸ್ತವಾಗುತ್ತಿದ್ದಂತೆ ರೆಕ್ಕೆ ಬಿಚ್ಚಿ ನಲಿದಾಡುವ ಪತಂಗಗಳು, ಹೂವಿನೊಳಗೆ ಲೀನವಾಗಿ ಮಕರಂದ ಹೀರುವ ಮನ ಮೋಹಕ ದೃಶ್ಯ... ಇವೆಲ್ಲ ಕಂಡಿದ್ದು ಜೋಯಿಡಾದ ಸಾಲು ಮರದ ತಿಮ್ಮಕ್ಕ ವೃಕ್ಷೋದ್ಯಾನದಲ್ಲಿರುವ ಚಿಟ್ಟೆ ಪಾರ್ಕ್‌ನಲ್ಲಿವೆ.

ದಿಗಂತ ವಿಶೇಷ

ಕರ್ನಾಟಕದ ಮೊದಲ ತೆರೆದ ಚಿಟ್ಟೆ ಉದ್ಯಾನವನ ಎಂಬ ಹೆಗ್ಗಳಿಕೆಗೆ ಪಾತ್ರವಾದ ಇದು, ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ಪಟ್ಟಣದ ಆರಂಭದಲ್ಲೇ ಸಿಗುತ್ತದೆ. ಒಂದು ಎಕರೆ ವಿಶಾಲವಾಗಿರುವ ಚಿಟ್ಟೆ ಪಾರ್ಕ್‌ನಲ್ಲಿ 114 ವಿವಿಧ ಚಿಟ್ಟೆ ಪ್ರಬೇಧವನ್ನು ಕಾಣಬಹುದು. ಕೇವಲ ಚಿಟ್ಟೆ ನೋಡಿ ಆನಂದಿಸುವ ಬದಲು ಅವುಗಳ ಕುರಿತು ಪ್ರಾಥಮಿಕ ಮಾಹಿತಿ ಪಡೆಯುವುದೇ ಈ ಚಿಟ್ಟೆ ಪಾರ್ಕ್‌ನ ಉದ್ದೇಶ.

ಚಿಟ್ಟೆ ಜೀವನ ಚಕ್ರ : ಪ್ರತಿ ಚಿಟ್ಟೆಯೂ ತನ್ನದೇ ಆದ ಆಶ್ರಯ ಗಿಡ ಹೊಂದಿದೆ. ಪ್ರತಿ ಚಿಟ್ಟೆ ಸಂತಾನೋತ್ಪತ್ತಿ ಕ್ರಿಯೆ ನಂತರ ತನ್ನ ಆಶ್ರಯ ಗಿಡದ ಮೇಲೆ ಮಾತ್ರ ಮೊಟ್ಟೆ ಇಡುತ್ತದೆ. ಚಿಟ್ಟೆ ಗಾತ್ರದಲ್ಲಿ ಸಣ್ಣದಿದ್ದರೂ, ಅದರ ಕುರಿತು ಗಂಟೆಗಟ್ಟಲೆ ಮಾಹಿತಿಯನ್ನು ಇಲ್ಲಿನ ಸಿಬ್ಬಂದಿಗಳು ವಿವರಿಸುವುದು ವಿಶೇಷ. ಹೆಚ್ಚಿನ ಮಾಹಿತಿಗಾಗಿ ಉದ್ಯಾನವನದಲ್ಲಿ ಚಿಟ್ಟೆಗಳ ಮಾಹಿತಿ ಫಲಕ ಅಳವಡಿಸಲಾಗಿದೆ. ಚಿಟ್ಟೆ ಸಂಶೋಧನೆಗೆ ಅನುಕೂಲ ವ್ಯವಸ್ಥೆಗಳು ನಡೆಯುತ್ತಿದ್ದು, ಪ್ರವಾಸಿಗರಿಗೆ ಪಿಪಿಟಿ ಮೂಲಕ ಚಿಟ್ಟೆಗಳ ಜೀವನ ಚಕ್ರ, ಪ್ರಬೇಧಗಳು ಮಾಹಿತಿ ತೋರಿಸುವ ಯೋಜನೆ ಅರಣ್ಯ ಇಲಾಖೆ ಹೊಂದಿದೆ.

ಹೆಸರಿನಲ್ಲಿ ವಿಶೇಷತೆ

ಚಿಟ್ಟೆಗಳು ಎಷ್ಟು ಆಕರ್ಷಕವೋ ಅಷ್ಟೇ ಅವುಗಳ ಹೆಸರು ಕೂಡ. ಚಿಟ್ಟೆಗಳ ಬಾಹ್ಯ ರೂಪದ ಆಧಾರದ ಮೇಲೆ ಅವುಗಳಿಗೆ ಹೆಸರಿಡಲಾಗಿದೆ. ಕಾಮನ್ ಟೈಗರ್, ಬ್ಲೂ ಟೈಗರ್, ಗ್ಲಾಸಿ ಟೈಗರ್. ಬ್ರಿಟಿಷರ ಆಳ್ವಿಕೆಯಲ್ಲಿ ಸೈನ್ಯದ ಪದನಾಮ ಆಧಾರದ ಮೇಲೆ ರಾಜಾ, ನವಾಬ್, ಸಾರ್ಜಂಟ್, ಕಮಾಂಡರ್ ಇತ್ಯಾದಿ ಹೆಸರಿಡಲಾಗಿದೆ. ಕಾಸ್ಟರ್, ಲೈಮ್ ಇತ್ಯಾದಿ ಚಿಟ್ಟೆಗಳ ಆಶ್ರಯ ಗಿಡದ ಆಧಾರದ ಮೇಲೆ ಅವುಗಳನ್ನು ಗುರುತಿಸಲಾಗುತ್ತದೆ.

ಪ್ರವೇಶಕ್ಕೆ ₹50 ಟಿಕೆಟ್

ಅರಣ್ಯ ಇಲಾಖೆಯಿಂದ ನಿರ್ಮಿತವಾದ ಈ ಉದ್ಯಾನವನ ವಾರದ ಪ್ರತಿದಿನವೂ ಪ್ರವಾಸಿಗರಿಗೆ ತೆರೆದಿರುತ್ತದೆ. 50 ರೂ. ಪ್ರವೇಶ ಶುಲ್ಕವಿದೆ. ಬೆಳಗ್ಗೆ 9.30ರಿಂದ ಮಧ್ಯಾಹ್ನದವರೆಗೆ ಚಿಟ್ಟೆಗಳ ವಿಹಂಗಮ ನೋಟ ಆನಂದಿಸಬಹುದು. ಈಗಾಗಲೇ ಮಹಾರಾಷ್ಟ್ರ, ಪಶ್ಚಿಮ ಬಂಗಾಲ, ಬೆಂಗಳೂರು ಹಾಗೂ ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಪ್ರವಾಸಿಗರು ಹಾಗೂ ಚಿಟ್ಟೆ ತಜ್ಞರು ಭೇಟಿ ನೀಡಿದ್ದಾರೆ. ಅರಣ್ಯ ಇಲಾಖೆ ವತಿಯಿಂದ ಶಾಲಾ ಮಕ್ಕಳಿಗಾಗಿ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಕೊರೋನಾ ಕಾರಣ ನಿರೀಕ್ಷಿತ ಪ್ರಮಾಣದ ಪ್ರವಾಸಿಗರು ಆಗಮಿಸದಿರುವುದು ಇಲ್ಲಿನ ಪ್ರವಾಸೋದ್ಯಮಕ್ಕೆ ಕೊಂಚ ಹಿನ್ನಡೆಯಾಗಿದೆ.

ಸಂಶೋಧನೆ, ಮಾಹಿತಿ ಉದ್ಯಾನವನ

ಇದೇ ರೀತಿ, ಕಾರವಾರದಲ್ಲೂ ಚಿಟ್ಟೆ ಪಾರ್ಕ್ ನಲ್ಲೂ ಕೂಡ ಸಾಕಷ್ಟು ಚಿಟ್ಟೆಗಳಿವೆ, ಆದರೆ, ಇಲ್ಲಿ ಇನ್ನಷ್ಟೇ ಅಭಿವೃದ್ಧಿ ಕಾಣಬೇಕಿದೆ. ಚಿಟ್ಟೆಗಳ ಪೋಷಣೆ ಜೊತೆಗೆ ಅವುಗಳ ಕುರಿತು ನಡೆಯುತ್ತಿರುವ ಸಂಶೋಧನೆ ಹಾಗೂ ಅಪಾರ ಮಾಹಿತಿ ನಮ್ಮ ಜ್ಞಾನ ಭಂಡಾರವನ್ನು ವಿಸ್ತರಿಸುತ್ತದೆ. ಅರಣ್ಯ ಇಲಾಖೆಯ ಈ ವಿಶೇಷ ಪ್ರಯತ್ನ ಅಭಿನಂದನಾರ್ಹ.

- 114 ಚಿಟ್ಟೆ ಪ್ರಬೇಧಗಳು ಒಂದೇ ಸೂರಿನಲ್ಲಿವೆ.
- ಚಿಟ್ಟೆ ವೀಕ್ಷಣೆ ಜೊತೆಗೆ ಅವುಗಳ ಸಂಶೋಧನೆಗೆ ಆದ್ಯತೆ.
- ಪ್ರತಿನಿತ್ಯ ಬೆಳಗ್ಗೆ 9.30ರಿಂದ ಸಂಜೆ 5 ಗಂಟೆಯವರೆಗೆ ಪಾರ್ಕ್ ವೀಕ್ಷಣೆಗೆ ಅವಕಾಶ.
- ದಾಂಡೇಲಿಯಿಂದ 21ಕಿ.ಮೀ. ಹಾಗೂ ಧಾರವಾಡದಿಂದ 78 ಕಿ.ಮೀ. ದೂರ.

"ಎರಡು ವರ್ಷಗಳ ಹಿಂದೆ ಈ ಚಿಟ್ಟೆ ಪಾರ್ಕ್ ಉದ್ಘಾಟನೆಯಾಗಿದ್ದರೂ, ಕೊರೋನಾ ಕಾರಣ ನಿರೀಕ್ಷಿತ ಪ್ರಮಾಣದ ಪ್ರವಾಸಿಗರು ಭೇಟಿ ನೀಡಿಲ್ಲ. ಸಾಮಾಜಿಕ ಜಾಲತಾಣದಲ್ಲಿ ಪ್ರಚಾರ ಸಿಗುತ್ತಿದ್ದಂತೆ, ಈ ಸ್ಥಳದ ಮಾಹಿತಿ ಜನರಿಗೆ ಗೊತ್ತಾಗುತ್ತಿದೆ. ಇನ್ನಷ್ಟು ಅಭಿವೃದ್ಧಿ ಕಾರ್ಯ ನಡೆಯುತ್ತಿದೆ. ಪ್ರವಾಸಿಗರಿಗೆ ಚಿಟ್ಟೆ ಕುರಿತು ಸಂಪೂರ್ಣ ಮಾಹಿತಿ ನಮ್ಮ ಸಿಬ್ಬಂದಿಗಳು ನೀಡುವರು.

■ **ಸಂತೋಷ ಗವಾಸ**, ಉಪ ವಲಯ ಅರಣ್ಯಾಧಿಕಾರಿ, ಜೋಯಿಡಾ.

ಕೆಂಪು ಕ್ರಾಂತಿಯ ಹಾದಿ

ಸಹಜ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಪ್ರಧಾನಿ ನೀಡಿದ ಕರೆಗೆ ಓಗೊಟ್ಟು ಕೈಗಾರಿಕಾ ತಜ್ಞ ಹಾಗೂ ಆಚಿ ಸಮೂಹದ ಮುಖ್ಯಸ್ಥ ಎ.ಡಿ. ಪದ್ಮಸಿಂಗ್ ಐಸಾಕ್ ಅವರು ಕೆಂಪು ಕ್ರಾಂತಿಯ ಮುಂದಾಳತ್ವ ವಹಿಸಿದ್ದಾರೆ. ಕೆಂಪು ಮೆಣಸು ಉತ್ಪಾದನೆಯಲ್ಲಿ ತಮಿಳುನಾಡಿನ ಅಗ್ರ ಸ್ಥಾನವನ್ನು ಪುನರ್‌ಸ್ಥಾಪಿಸುವುದರ ಜೊತೆಗೆ ಸಹಜ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ರೈತರಲ್ಲಿ ಜಾಗೃತಿ ಮೂಡಿಸುವುದು ಕೆಂಪು ಕ್ರಾಂತಿಯ ಉದ್ದೇಶವಾಗಿದೆ.

ದೇಶದ ಸಮಗ್ರ ಅಭಿವೃದ್ಧಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಹಲವಾರು ಯೋಜನೆಗಳನ್ನು ಜಾರಿಗೆ ತರುತ್ತಿದ್ದಾರೆ. ಸಹಜ ಕೃಷಿಗೆ ಹೆಚ್ಚಿನ ಆದ್ಯತೆ ನೀಡುವುದು ಇವುಗಳಲ್ಲಿ ಪ್ರಮುಖವಾಗಿದೆ. ಮತ್ತು ಇದು ಅವರ ಕನಸೂ ಆಗಿದೆ.

ಪ್ರಧಾನಿ ಅವರ ಈ ಕನಸು ನನಸು ಮಾಡುವ ನಿಟ್ಟಿನಲ್ಲಿ ಆಚಿ ಸಮೂಹವು ರೈತರೊಟ್ಟಿಗೆ ಕೈಜೋಡಿಸಿದೆ. ಭಾರತದಲ್ಲಿ ಈ ಮುನ್ನ ಅನೇಕ ಕ್ರಾಂತಿಗಳು ನಡೆದಿವೆ. ಹಾಲು ಉತ್ಪಾದನೆ ಹೆಚ್ಚಳಕ್ಕೆ ಬಿಳಿ ಕ್ರಾಂತಿ, ಸಾಗರ ಸಂಪನ್ಮೂಲ ಆಕರಕ್ಕೆ ನೀಲಿ ಕ್ರಾಂತಿ ಹಾಗೂ ಮೊಟ್ಟೆ ಉತ್ಪಾದನೆ ಹೆಚ್ಚಿಸಲು ಬೆಳ್ಳಿ ಕ್ರಾಂತಿ ನಡೆದಿದೆ. ಈಗ ಈ ಸಾಲಿನಲ್ಲಿ ಕೆಂಪು ಕ್ರಾಂತಿ ಸೇರಿಕೊಂಡಿದೆ.

ಆಚಿ ಸಮೂಹದ ಮುಖ್ಯಸ್ಥ ಎ.ಡಿ. ಪದ್ಮಸಿಂಗ್ ಐಸಾಕ್ ಅವರ ದೂರದೃಷ್ಟಿ ಫಲವಾಗಿ ಕೆಂಪುಕ್ರಾಂತಿ ಮೈದಾಳಿದೆ. ಈ ಬಗ್ಗೆ ಖುದ್ದು ಪದ್ಮಸಿಂಗ್ ಅವರೇ ಮಾತನಾಡಿದ್ದಾರೆ

ಕೆಂಪು ಕ್ರಾಂತಿ ಎಂದರೆ...

ಜನರ ಆರೋಗ್ಯ ಕಾಳಜಿಯನ್ನು ಗಮನದಲ್ಲಿಟ್ಟುಕೊಂಡು ಸಹಜ ಕೃಷಿ ಪದ್ಧತಿಗಳ ಮೂಲಕ ಕೆಂಪು ಮೆಣಸು ಬೆಳೆ ತೆಗೆಯುವುದು ಕೆಂಪು ಕ್ರಾಂತಿಯ ಮೂಲ ಉದ್ದೇಶವಾಗಿದೆ. ಕೃಷಿ ತಜ್ಞ ನಲ್ಲಕಿರೈ ಜಗನ್ ಜೊತೆ ಆಚಿ ಸಂಸ್ಥೆ ಜಂಟಿಯಾಗಿ ಈ ಕ್ರಾಂತಿಯಲ್ಲಿ ತೊಡಗಿದೆ.

ಕೆಂಪು ಮೆಣಸೇ ಏಕೆ

ಇಂದು ಇಡೀ ಜಗತ್ತು ಕೆಂಪು ಮೆಣಸಿಗಾಗಿ ಭಾರತದತ್ತ ನೋಡುತ್ತಿದೆ. ಚೀನಾ ಸೇರಿದಂತೆ ಜಗತ್ತಿನ ಬಹುತೇಕ ದೇಶಗಳಿಗೆ ಕೆಂಪು ಮೆಣಸಿನಕಾಯಿಯನ್ನು ಭಾರತವು ರಫ್ತು ಮಾಡುತ್ತಿದೆ.

ತಮಿಳುನಾಡಿನ ಆಯ್ಕೆ

ಇಲ್ಲಿನ ಹವಾಮಾನ ಮತ್ತು ಮಣ್ಣಿನ ಗುಣ ಕೆಂಪು ಮೆಣಸು ಬೆಳೆಗೆ ಪ್ರಶಸ್ತವಾಗಿದೆ. ಭತ್ತಕ್ಕಿಂತ ಒಂದು ಕೈ ಹೆಚ್ಚಿನ ಬೆಲೆ ಮೆಣಸು ಬೆಳೆಯುವುದರಿಂದ ರೈತರಿಗೆ

ಸಿಗುತ್ತದೆ. ಇದರ ನಿರ್ವಹಣೆ ವೆಚ್ಚವೂ ಕಡಿಮೆ ಇದೆ.

ಬೆಲೆ ನಿಗದಿ ಹೇಗೆ

ಬೆಳೆ ತೆಗೆಯುವ ಮುನ್ನವೇ ಕನಿಷ್ಟ ಖರೀದಿ ಬೆಲೆಯನ್ನು ರೈತರಿಗೆ ಗೊತ್ತು ಮಾಡಲಾಗುತ್ತದೆ. ಒಂದು ವೇಳೆ ಕಟಾವಿನ ಹೊತ್ತಿಗೆ ಮಾರುಕಟ್ಟೆ ಧಾರಣೆ ಹೆಚ್ಚಿದ್ದರೇ ಅದೇ ಬೆಲೆ ನೀಡಿ ಖರೀದಿ ಮಾಡಲಾಗುತ್ತದೆ.

ಆಚಿಯ ಬಗ್ಗೆ ಹೇಳುವುದಾದರೆ

20 ವರ್ಷಗಳ ಹಿಂದೆ ಆಚಿ ಸಂಸ್ಥೆಯ ಮೂಲಕ ಆಹಾರ ಕ್ಷೇತ್ರಕ್ಕೆ ಕಾಲಿಟ್ಟೆವು. 10 ವರ್ಷಗಳ ಹಿಂದೆ ಈ ಕ್ಷೇತ್ರದಲ್ಲಿ ನಂಬರ್ ಒನ್ ಆಗಿದ್ದೇವೆ. ಆಹಾರವೇ ಔಷಧ ಎಂಬ ನಮ್ಮ ತತ್ವಕ್ಕೆ ಅನುಗುಣವಾಗಿಯೇ ಕೆಂಪು ಕ್ರಾಂತಿ ಒಡಮೂಡಿದೆ.

ತಮಿಳುನಾಡಿನ ಎಲ್ಲೆಲ್ಲಿ ಕೆಂಪುಕ್ರಾಂತಿ

ತಿರುವಳ್ಳುರು ಒಂದರಲ್ಲಿಯೇ ಸುಮಾರು 1 ಸಾವಿರ ಎಕರೆ ಪ್ರದೇಶದಲ್ಲಿ ಕೆಂಪು ಮೆಣಸು ಬೆಳೆಯಲಾಗುತ್ತಿದೆ. ಇದಲ್ಲದೇ ಶಿವಗಂಗೆ, ರಾಮನಾಥಪುರ, ತೂತ್ತುಕುಡಿ, ತೇಂಕಾಸಿ, ವಿರುಧನಗರ ಮತ್ತು ನೆಲ್ಲೈನಲ್ಲಿ ಸಹ ರೈತರು ಈ ಕೃಷಿಯಲ್ಲಿ ತೊಡಗಿದ್ದಾರೆ.

ಮುಂದಿನ ಯೋಜನೆ

ಕೆಂಪು ಮೆಣಸಿನ ಜೊತೆಗೆ ಸೇಲಂ, ಈರೋಡ್, ಕೃಷ್ಣಗಿರಿ, ನಾಮಕ್ಕಲ್ ಮತ್ತು ಕರೂರಿನಲ್ಲಿ ಅರಿಷಿಣ ಬೆಳೆಯುವ ಯೋಜನೆ ಇದೆ.

ಭಾರತೀಯರ ಆರೋಗ್ಯ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಸಹಜ ಕೃಷಿ ಪದ್ಧತಿ ಮೂಲಕ ಮೆಣಸು ಬೆಳೆ ತೆಗೆದಯುವುದೇ ಕೆಂಪು ಕ್ರಾಂತಿಯ ಉದ್ದೇಶ. ಪ್ರಧಾನ ಮಂತ್ರಿಯ ಕನಸನ್ನು ನನಸು ಮಾಡುವ ಉದ್ದೇಶದಿಂದ ಕೆಂಪು ಕ್ರಾಂತಿಯನ್ನು ರೂಪಿಸಲಾಗಿದೆ.

■ ಎ.ಡಿ. ಪದ್ಮಸಿಂಗ್
ಆಚಿ ಸಮೂಹದ ಮುಖ್ಯಸ್ಥ



The Magnolia grandiflora tree, located on IISc campus, was planted by Queen Elizabeth on February 21, 1961. (Inset) A flower from the tree. PHOTO CREDIT: SHARATH AHUJA

Exotic Magnolia grandiflora in full bloom on IISc campus

The evergreen species is native to south-eastern USA, and the saplings in Bengaluru were planted 61 years ago

NINA C GEORGE
TEAM METROLIFE

The Magnolia grandiflora, also known as 'tree lotus,' is in full bloom on the Indian Institute of Science campus.

It begins flowering through July and September, and reaches its peak in February and March.

While there are two magnolia grandiflora trees near the J N Tata statue, the other is located in Lalbagh, also on the campus.

Sharath Ahuja, retired technical officer, IISc, who has been photographing the trees for a while, says the saplings were planted by Queen Elizabeth during her visit to the IISc campus on February 21, 1961. The trees are now 61 years old.

"This medium-sized evergreen tree is native to the South Eastern parts (Virginia, Central Florida and Texas) of the United States. It is popularly known as the southern magnolia," he says.

The genus is named Magnolia in honour of Pierre Magnol, a French botanist, with grandiflora derived from the Latin words grandis for 'big' and 'flor' for flower. Interestingly, the Hindi name is hima champa and it is called dodda-bili-sampige in Kannada.

Magnolia grows in any soil condition, says Dr K Sankara Rao, retired scientist, IISc, and author of the book, 'IISc a Botanist's Delight'.

He began studying the Magnolia tree as a hobby. "It is an ornamental tree with big, showy flowers that give out a lemony scent. It is a slow-growing tree. This is one among the very few trees brought in from overseas."

14-02-2022
Dec Hrd Pg 3A